# ನಿಮ್ಮೊಡನೆ

## ಹೊಸ ವರ್ಷದ ಬೆಳಕಿನಲ್ಲಿ...

ಹೊಸ ವರ್ಷದ ಹೆಜ್ಜೆಗುರುತಿನ ಕಾತರ ಆರೋಗ್ಯಪೂರ್ಣ ಬದುಕಿಗೆ ದಾರಿಯಾಗಲಿ. ಹೊಸ ಪ್ರತಿಜ್ಞೆ, ಹೊಸ ಬದುಕಿಗೆ ನಾಂದಿ ಹಾಡಿದರೆ, ಸಾಧನೆಯ ಹಾದಿಯ ಮೈಲುಗಲ್ಲು ವ್ಯಸನಮುಕ್ತ ಭಾರತ ಸಂಕಲ್ಪಕ್ಕೂ ಮಾದರಿಯಾದೀತು...

ಚಳಿ ಸಣ್ಣಗೆ ನಡುಗಿಸಲಾರಂಭಿಸಿದೆ. ಈ ಚಳಿಯಲ್ಲೇ ಹೊಸ ಬೆಳಕಿನ ಹೊಸ ಗಾಳಿ ಮನಸ್ಸನ್ನು ಬೆಚ್ಚಗಿರಿಸಿದೆ. ಜಗತ್ತು ಹೊಸ ವರ್ಷದ ಸಂಭ್ರಮದಲ್ಲಿ ಮಿಂದಿದೆ. ಹಳೆಯದನ್ನು ಮರೆತು, ಹೊಸ ನಿರೀಕ್ಷೆಗಳಿಗೆ ಒಡ್ಡಿಕೊಳ್ಳಲು ಜನ ಕಾತರರಾಗಿದ್ದಾರೆ. ಹೊಸ ನಿರ್ಣಯ, ಸಂಕಲ್ಪಗಳ ಶಪಥಗೈದವರೂ ಇದ್ದಾರೆ. ದುಶ್ಚಟಗಳಿಂದ ದೂರ ಉಳಿಯುವ ಪ್ರತಿಜ್ಞೆಯಿಂದ, ಸಾಧನೆಯ ಹಾದಿಯಲ್ಲಿ ಮೈಲುಗಲ್ಲು ನೆಡಲು ಬೇಕಾದ ನಿರ್ದಿಷ್ಟ ಗುರಿ ನಿಗದಿ ಮಾಡಿಕೊಳ್ಳುವವರೆಗೂ ಇವು ಚಾಚಿಕೊಂಡಿರುತ್ತವೆ. ಇಂತಹ ನಿರೀಕ್ಷೆಗಳೇ ಅಲ್ಲವೆ ನಮ್ಮನ್ನು ಕೈಹಿಡಿದು ಮುನ್ನಡೆಸುವುದು?

ನಿನ್ನೆಯ ಅನುಭವಗಳು ನಾಳೆಯ ಬದುಕಿಗೆ ದಾರಿದೀಪವಾದರೆ ಹೊಸ ವರ್ಷದ ನಿರ್ಣಯಗಳಿಗೆ ಹೊಸ ಹೊಳಪು ಬರುತ್ತದೆ. ಅದರೊಂದಿಗೆ ಬದ್ಧತೆಯೂ ಸೇರಿದರೆ ಈಡೇರುವುದು ಕಷ್ಟವಾಗಲಾರದು. ಭಾರತದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚಿನವರು 25 ವರ್ಷ ವಯಸ್ಸಿಗಿಂತ ಕೆಳಗಿನವರು. ಈ ಯುವ ಪೀಳಿಗೆಯಲ್ಲಿ ಅತಿಯಾದ ಮದ್ಯ ಸೇವನೆ ಹಾಗೂ ಮಾದಕ ವಸ್ತುಗಳ ವ್ಯಸನದಂಥ ಚಟಗಳನ್ನು ಅಂಟಿಸಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ. ಇದು ಕಳವಳಕಾರಿ. ಈ ಹಿನ್ನೆಲೆಯಲ್ಲೇ 'ವ್ಯಸನಮುಕ್ತ ಭಾರತ'ಕ್ಕಾಗಿ ರಾಷ್ಟ್ರದಾದ್ಯಂತ ಶೀಘ್ರವೇ ಆಂದೋಲನ ಆರಂಭಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿರುವುದು. ದುಶ್ಚಟಗಳಿಗೆ ಕಡಿವಾಣ ಹಾಕಲು ಹೊಸ ವರ್ಷ ಪ್ರೇರಣೆಯಾದರೆ ಅದಕ್ಕಿಂತ ಗಮ್ಮತ್ತಿನ ಸಂಗತಿ ಮತ್ತೊಂದು ಇರಲಾರದು.

ನಮ್ಮಲ್ಲಿ ವೈದ್ಯಕೀಯ ಸೌಲಭ್ಯಗಳು ವಿಸ್ತರಣೆಯಾಗುತ್ತಿವೆ. ವೈದ್ಯಕೀಯ ಕಾಲೇಜುಗಳ ಸಂಖ್ಯೆಯೂ ಹೆಚ್ಚುತ್ತಿದೆ. ಅತ್ಯಾಧುನಿಕ ಉಪಕರಣಗಳನ್ನು ಹೊಂದಿದ ಸುಸಜ್ಜಿತ ಆಸ್ಪತ್ರೆಗಳು ತಲೆ ಎತ್ತುತ್ತಿವೆ. ಈ ಕ್ಷೇತ್ರದಲ್ಲಿ ವಿವಿಧ ದೇಶಗಳಲ್ಲಿ ಸಂಶೋಧನೆಗಳೂ ವ್ಯಾಪಕವಾಗಿ ನಡೆಯುತ್ತಿವೆ. ಅದರ ಜತೆಗೇ ಹೊಸ ಬಗೆಯ ಸೋಂಕು, ರೋಗ ರುಜಿನಗಳ ರೂಪದಲ್ಲಿ ಸವಾಲುಗಳೂ ಎದುರಾಗುತ್ತಿವೆ. 2014ರಲ್ಲಿ ಎಬೋಲಾ ಸೋಂಕು, ಪಶ್ಚಿಮ ಆಫ್ರಿಕಾ ರಾಷ್ಟ್ರಗಳಾದ ಲೈಬೀರಿಯಾ, ಗಿನಿಯಾ, ಸಿಯೆರಾ ಲಿಯೋನ್ ದೇಶಗಳನ್ನು ಹೈರಾಣ ಆಗಿಸಿತು. ಇದರಿಂದ ಉಂಟಾದ ಭೀತಿ ಇಡೀ ಜಗತ್ತನ್ನು ತಲ್ಲಣಗೊಳಿಸಿತು. ಇಂತಹ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಬೇಕಾದ ಸಂಶೋಧನೆಗಳು ಮತ್ತಷ್ಟು ವೇಗ ಪಡೆಯುವ ಅಗತ್ಯವನ್ನು ಈ ಸೋಂಕು ಜಗತ್ತಿಗೆ ಸಾರಿದೆ.

ವೈದ್ಯಕೀಯ ಸೌಕರ್ಯಗಳು ಹೆಚ್ಚುತ್ತಿದ್ದರೂ ಅವು ಎಲ್ಲರಿಗೂ ಸಮಾನ ನೆಲೆಯಲ್ಲಿ ನಿಲುಕುತ್ತಿಲ್ಲ. ಗ್ರಾಮೀಣ ಭಾಗದ ಜನರಿಗೆ  ಈ ಸೌಕರ್ಯಗಳು ಇನ್ನೂ ಮರೀಚಿಕೆಯೇ ಆಗಿವೆ. ಬಹುಪಾಲು ಸೌಲಭ್ಯಗಳು ನಗರ ಪ್ರದೇಶಗಳಲ್ಲೇ ಕೇಂದ್ರೀಕೃತವಾಗಿವೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಆರೋಗ್ಯ ವಿಮೆ ಪಡೆದವರ ಪ್ರಮಾಣ ಶೇ.17ರಷ್ಟು ಮಾತ್ರ. ವೈದ್ಯಕೀಯ ವೆಚ್ಚದ  ಶೇ.70 ರಷ್ಟು ಮೊತ್ತವನ್ನು ಕುಟುಂಬಗಳು ತಮ್ಮ ಕೈಯಿಂದಲೇ ಭರಿಸುತ್ತಿವೆ ಎಂಬುದು ಸಮೀಕ್ಷೆಗಳಿಂದ ಗೊತ್ತಾಗಿದೆ. ವೈದ್ಯಕೀಯ ಸೇವೆ ಕೂಡ ದುಬಾರಿಯಾಗಿದೆ. ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಈ ವೆಚ್ಚ ಭರಿಸುವುದು ಆಗದ ಮಾತು. ವಿಮೆ ಸೌಲಭ್ಯಕ್ಕೆ ಒಳಗಾಗುವ ಮೂಲಕ ಈ ಹೊರೆ ಇಳಿಸಿಕೊಳ್ಳಬಹುದು. ಸಾರ್ವಜನಿಕ ಆರೋಗ್ಯಕ್ಕೆ ಮತ್ತಷ್ಟು ಒತ್ತು ಸಿಗಬೇಕು ಎಂಬುದು ಜನಸಾಮಾನ್ಯರ ಭಾವನೆ.  ಆದರೆ ಕೇಂದ್ರ ಸರ್ಕಾರದ ಚಿಂತನೆ ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗಿದಂತೆ  ಭಾಸವಾಗುತ್ತಿದೆ. ಈ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಒದಗಿಸುತ್ತಿರುವ ಅನುದಾನ ಪ್ರಮಾಣಕ್ಕೆ  ಕತ್ತರಿ ಹಾಕುವ ಸೂಚನೆ  ಹೊರಬಿದ್ದಿದೆ. ಹಾಗಾಗದಿರಲಿ ಎಂದು ಆಶಿಸೋಣ.

ಆರೋಗ್ಯದ ಬಗ್ಗೆ ವ್ಯಕ್ತಿ ನೆಲೆಯಲ್ಲೂ ನಾವು ಹೆಚ್ಚಿನ ಎಚ್ಚರಿಕೆ ವಹಿಸಬೇಕಾದ ಅಗತ್ಯ ಇದೆ. ಬದಲಾದ ಜೀವನ ಶೈಲಿ ಹಾಗೂ ಅದರ ಪರಿಣಾಮವಾಗಿ ಆಗುತ್ತಿರುವ ಒತ್ತಡಗಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ನಮ್ಮನ್ನು ಕುಗ್ಗಿಸುತ್ತಿವೆ. ಅದರ ಹೊಡೆತಕ್ಕೆ ಸಿಲುಕದಿರಲು ಹಾಗೂ ಜೀವಚೈತನ್ಯ ಕಾಪಾಡಿಕೊಳ್ಳಲು ಪ್ರತಿಯೊಬ್ಬರೂ ಮತ್ತಷ್ಟು ಕಾಳಜಿ ಮತ್ತು ಮುತುವರ್ಜಿ ವಹಿಸಬೇಕು. ಹೊಸ ವರ್ಷ ಈ ನಿಟ್ಟಿನಲ್ಲಿ ನಮ್ಮೆಲ್ಲರಿಗೂ ಪ್ರೇರಣೆಯಾಗಲಿ.

■ **ಎನ್.ಉದಯಕುಮಾರ್**

